

‘ಆ ಕರಾಳ ರಾತ್ರಿ’ 2018ರಲ್ಲಿ ತೆರೆಕಂಡು ಸುದ್ದಿ ಮಾಡಿದ ಕನ್ನಡ ಚಿತ್ರಗಳಲ್ಲೊಂದು. ಈ ಸಿನಿಮಾದ ಶೀರ್ಷಿಕೆಯನ್ನು ‘ಆ ಕರಾಳ ವರ್ಷ’ ಎಂದು ಬದಲಿಸಿದರೆ, ಅದು 2018ರಲ್ಲಿ ಕನ್ನಡ ಚಿತ್ರರಂಗದ ಸ್ಥಿತಿಗತಿಯನ್ನು ಬಣ್ಣಿಸಲಿಕ್ಕೆ ಒಳ್ಳೆಯ ವಿಶೇಷಣವಾದೀತು. ಸುತ್ತುಬಳಸಿನ ದಾರಿ ಬಿಟ್ಟು ನೇರವಾಗಿ ಹೇಳುವುದಾದರೆ, ಎಂಬತ್ತನಾಲ್ಕು ವರ್ಷಗಳ ಕನ್ನಡ ಚಿತ್ರರಂಗದ ಇತಿಹಾಸದಲ್ಲಿ 2018 ಅತ್ಯಂತ ಕರಾಳವರ್ಷ!

ಆಯಾ ವರ್ಷದಲ್ಲಿ ತೆರೆಕಂಡ ಸಿನಿಮಾಗಳ ಸೋಲು ಗೆಲುವಿನ ಮಾನದಂಡದ ಹಿನ್ನೆಲೆಯಲ್ಲಿ ಚಿತ್ರರಂಗದ ಯಶಸ್ಸನ್ನು ಪ್ರತಿ ವರ್ಷ ಗುರ್ತಿಸುವುದು ರೂಢಿ. ಈ ಹಿನ್ನೆಲೆಯಲ್ಲಿ ನೋಡಿದರೆ ಸೂರಿ ನಿರ್ದೇಶನದ ‘ಟಗರು’ ಹಾಗೂ ವರ್ಷದ ಕೊನೆಯಲ್ಲಿ ತೆರೆಕಂಡು ಬಹುದೊಡ್ಡ ಯಶಸ್ಸು ಪಡೆಯುವಂತೆ ಕಾಣಿಸುತ್ತಿರುವ ಪ್ರಶಾಂತ್ ನೀಲ್ ನಿರ್ದೇಶನದ ‘ಕೆಜಿಎಫ್’ ಚಿತ್ರಗಳನ್ನು ಹೊರತುಪಡಿಸಿದರೆ ಮತ್ತೊಂದು ಬೆಳ್ಳಿಗೆರೆ 2018ರಲ್ಲಿಲ್ಲ. ಈ ದಶಕದ ಕಳೆದ ಆರೇಳು ವರ್ಷಗಳಿಗೆ ಹೋಲಿಸಿಕೊಂಡರೆ ಈ ವರ್ಷದ್ದು ಅತ್ಯಂತ ನಿರಾಶಾದಾಯಕ ಬೆಳೆ. ಆದರೆ, ಸಿನಿಮಾಗಳ ಸೋಲಿನಿಂದಷ್ಟೇ 2018ನ್ನು ಕರಾಳವರ್ಷ ಎಂದು ಕರೆಯಲಿಕ್ಕೆ ಸಾಧ್ಯವಿಲ್ಲ. ಆ ನಿರ್ಧಾರಕ್ಕೆ ಮತ್ತೆರಡು ಕಾರಣಗಳಿವೆ. ಒಂದು, ಅಂಬರೀಷ್ ನಿರ್ಗಮನದಿಂದ ಉಂಟಾದ ನಿರ್ವಾತ. ಎರಡು, ‘ಮೀ ಟೂ’ ಪ್ರಕರಣ ಬಯಲು ಮಾಡಿದ ಚಿತ್ರೋದ್ಯಮದಲ್ಲಿನ ನೈತಿಕ ಅಧಃಪತನ.

ಮೊದಲಿಗೆ, 2018ರ ಕೆಲವು ಅಂಕಿಅಂಶಗಳನ್ನು ನೋಡೋಣ. ವರ್ಷದ ಆರಂಭದಲ್ಲಿ ತೆರೆಕಂಡ ‘ಬೃಹಸ್ಪತಿ’ಯಿಂದ ಕ್ರಿಸ್‌ಮಸ್ ವೇಳೆಗೆ ತೆರೆಕಂಡ ‘ಕೆಜಿಎಫ್’ವರೆಗಿನ ಚಿತ್ರಗಳ ಸಂಖ್ಯೆ ಸುಮಾರು 230ಕ್ಕೂ ಹೆಚ್ಚು. ಸಾಮಾನ್ಯವಾಗಿ ಪ್ರತಿ ವರ್ಷ ತೆರೆಕಾಣುವ ಒಟ್ಟು ಚಿತ್ರಗಳಲ್ಲಿ ಶೇ. 5ರಿಂದ 10ರಷ್ಟು ಸಿನಿಮಾಗಳ ಯಶಸ್ಸಿನ ಸರಾಸರಿಯನ್ನು ಚಲನಚಿತ್ರ ಇತಿಹಾಸದುದ್ದಕ್ಕೂ ನೋಡುತ್ತೇವೆ. ಈ ಲೆಕ್ಕಾಚಾರದಲ್ಲಿ 12ರಿಂದ 25 ಸಿನಿಮಾಗಳು 2018ರಲ್ಲಿ ಯಶಸ್ಸು ಕಾಣಬೇಕಿತ್ತು. ದೊಡ್ಡ ಸಂಖ್ಯೆಯ ಚಿತ್ರಗಳು ತೆರೆಕಂಡಿರುವ ಹಿನ್ನೆಲೆಯಲ್ಲಿ ಯಶಸ್ಸಿನ ಪ್ರಮಾಣವೂ ಹೆಚ್ಚಾಗಬೇಕಿತ್ತು. ಆದರೆ, ಆಗಿರುವುದಾದರೂ ಏನು? ‘ಟಗರು’, ‘ಕೆಜಿಎಫ್’ ಹೊರತುಪಡಿಸಿದರೆ ಉಳಿದ್ಯಾವ ಚಿತ್ರದ್ದೂ ಕಣ್ಣು ಕೋರೈಸುವ

## ಯಶ್ ವರ್ಷ

2016ರಲ್ಲಿ ತೆರೆಕಂಡ ‘ಸಂತು ಸ್ಟ್ರೈಟ್ ಫಾರ್ವರ್ಡ್’ ಚಿತ್ರದ ನಂತರ ಎರಡು ವರ್ಷಗಳ ಕಾಲ ಯಶ್‌ರ ಯಾವ ಚಿತ್ರವೂ ತೆರೆಕಂಡಿರಲಿಲ್ಲ. ಜನಪ್ರಿಯ ನಟನೊಬ್ಬ ಇಷ್ಟು ದೀರ್ಘಕಾಲ ಬೆಳ್ಳಿಪರದೆಯಿಂದ ದೂರವಿರುವುದು ಬಹು ದೊಡ್ಡ ರಿಸ್ಕ್. ಆದರೆ, ಈ ಸವಾಲನ್ನು ಯಶಸ್ವಿಯಾಗಿ ಎದುರಿಸಿರುವ ಯಶ್ ‘ಕೆಜಿಎಫ್’ ಮೂಲಕ ದೊಡ್ಡ ಜಿಗಿತ ಕಂಡಿದ್ದಾರೆ, ಕನ್ನಡದಾಚೆಗೂ ತಮ್ಮ ಇಮೇಜನ್ನು ವಿಸ್ತರಿಸಿಕೊಂಡಿದ್ದಾರೆ. ತೆಲುಗು, ತಮಿಳು, ಹಿಂದಿ ಚಿತ್ರಗಳಲ್ಲಿ ಅಭಿನಯಿಸುವ ಮೂಲಕ ಸುದೀಪ್ ರಾಷ್ಟ್ರೀಯಮಟ್ಟದಲ್ಲಿ ಹೆಸರು ಮಾಡಿದ್ದರು. ಈಗ ಯಶ್ ಕನ್ನಡ ಚಿತ್ರವನ್ನೇ ಬಾಲಿವುಡ್‌ಗೂ ದಕ್ಷಿಣಭಾರತಕ್ಕೂ ತಲುಪಿಸುವ ಮೂಲಕ ಮತ್ತೂ ಒಂದು ಹೆಜ್ಜೆ ಮುಂದೆಹೋಗಿದ್ದಾರೆ. ಈ ಗೆಲುವು ಯಶ್‌ರ ವೈಯಕ್ತಿಕ ಇಮೇಜಿನ ಹೊಳಪಷ್ಟೇ ಅಲ್ಲದೆ, ಒಟ್ಟಾರೆ ಕನ್ನಡ ಚಿತ್ರರಂಗದ ಮಾರುಕಟ್ಟೆಯ ವಿಸ್ತರಣೆಯ ಮಾರ್ಗವೂ ಹೌದು ಎನ್ನುವುದರಲ್ಲಿ ‘ಕೆಜಿಎಫ್’ ಚಿತ್ರದ ಯಶಸ್ಸಿನ ಮಹತ್ವವಿದೆ.

ಎರಡು ವರ್ಷಗಳ ಕಾಲ ಯಶ್ ಸಿನಿಮಾಗಳಲ್ಲಿ ಅಭಿನಯಿಸದಿದ್ದರೂ ಒಂದಲ್ಲಾ ಒಂದು ಕಾರಣದಿಂದಾಗಿ ಅವರು ಸುದ್ದಿಯಲ್ಲಿದ್ದರು. ‘ಯಶೋಮಾರ್ಗ’ ಸಂಸ್ಥೆಯ ಮೂಲಕ ಕೊಪ್ಪಳ ಜಿಲ್ಲೆಯ ತಲ್ಲೂರಿನ ಕೆರೆಯನ್ನು ಪುನರುಜ್ಜೀವನಗೊಳಿಸಿದ್ದು ಅವರ ಸಾಮಾಜಿಕ ಕಾಳಜಿಗೆ ಕನ್ನಡಿಯಂತಿದೆ. ವರ್ಷದ ಕೊನೆಯಲ್ಲಿ, ಯಶ್–ರಾಧಿಕಾ ದಂಪತಿಗೆ ಮಗಳು ಜನಿಸಿದ್ದು (ಆ ಮಗುವಿಗೆ ಅಂಬರೀಷ್ ತಮ್ಮ ಸಾವಿಗೆ ಮೊದಲೇ ಕಲಘಟಗಿ ತೊಟ್ಟಿಲನ್ನು ಉಡುಗೊರೆಯಾಗಿ ನೀಡಲು ಯೋಜಿಸಿದ್ದು) ಕೂಡ ಸುದ್ದಿಯಾಗಿತ್ತು.